# ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ : 2025–26

## 9ನೆಯ ತರಗತಿ

## ಪ್ರಥಮ ಭಾಷೆ ಸಿರಿ ಕನ್ನಡ

**ಸಮಯ :3.ಗಂಟೆ 15ನಿ** **ಗರಿಷ್ಠ ಅಂಕಗಳು : 100**

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ.**

1. **'ಕುಲೋತ್ತುಂಗ'** ಪದದಲ್ಲಿ ಉಂಟಾದ ಸಂಧಿ. **1x6=6**
   (ಅ) ಆಗಮಸಂಧಿ (ಆ) ಗುಣಸಂಧಿ
   (ಇ) ಆದೇಶಸಂಧಿ (ಈ) ಲೋಪಸಂಧಿ
2. **'ದಿಗ್ವಾಚಕ'** ಪದಕ್ಕೆ ಉದಾಹರಣೆ.
   (ಅ) ಮೂಡಣ (ಆ) ಅವಳು
   (ಇ) ಹೊನ್ನು (ಈ) ನದಿ
3. **'ನೀರನ್ನು'** ಪದದಲ್ಲಿರುವ ವಿಭಕ್ತಿಯ ಹೆಸರು;
   (ಅ) ಪ್ರಥಮಾ (ಆ) ದ್ವಿತೀಯ
   (ಇ) ತೃತೀಯಾ (ಈ) ಚತುರ್ಥೀ
4. **'ಬಣ್ಣಬಣ್ಣ'** ಪದವು ಈ ವ್ಯಾಕರಣಾಂಶಕ್ಕೆ ಸೇರಿದೆ.
   (ಅ) ದ್ವಿರುಕ್ತಿ (ಆ) ಅನುಕರಣಾವ್ಯಯ
   (ಇ) ಜೋಡುನುಡಿ (ಈ) ನುಡಿಗಟ್ಟು
5. **'ತಲೆನೋವು'** ಪದವು ಈ ಸಮಾಸಕ್ಕೆ ಉದಾಹರಣೆ.
   (ಅ) ತತ್ಪುರುಷ ಸಮಾಸ (ಆ) ಗಮಕ ಸಮಾಸ
   (ಇ) ದ್ವಿಗು ಸಮಾಸ (ಈ) ಕ್ರಿಯಾಸಮಾಸ
6. **"ದೇವರು ಎಲ್ಲರಿಗೂ ಒಳ್ಳೆಯದನ್ನೇ ಉಂಟು ಮಾಡಲಿ"** – ಈ ವಾಕ್ಯದಲ್ಲಿನ ಕ್ರಿಯಾಪದ.
   (ಅ) ದೇವರು (ಆ) ಎಲ್ಲರಿಗೂ
   (ಇ) ಒಳ್ಳೆಯನ್ನೇ (ಈ) ಮಾಡಲಿ

**II. ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀಪದವನ್ನು ಬರೆಯಿರಿ.** **1x4=4**

7. ವ್ರಜ : ಸಮೂಹ : : ತಂಡುಲ : ______________
8. ಮ್ಯಾಲೆ : ಮೇಲೆ : : ಇಚಾರಾ : ______________
9. ರಾಜ : ರಾಯ : : ಶೃಂಗಾರ : ______________
10. ತಿನ್ನನು : ನಿಷೇಧಾರ್ಥಕ : : ತಿಂದಾನು : ______________

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **1x7=7**

11. ಬನದಮ್ಮನಹಳ್ಳಿಯ ಪಂಚಾಯತಿಯಲ್ಲಿ ಯಾರ್‍ಯಾರ ನಡುವೆ ನ್ಯಾಯ ತೀರ್ಮಾನವಾಗುತ್ತಿತ್ತು?
12. ಜಯಪುರದ ಜನರಿಗೆ ಯಾವ ಬಣ್ಣಗಳು ಇಷ್ಟ?
13. ಅಮಾತ್ಯರು ಯಾವ ವಿಷಯದಲ್ಲಿ ನಿಪುಣರಾಗಿರಬೇಕು?
14. ರಾಜನಿಗೆ ಮಹತ್ತರವಾದ ಶ್ರೇಯಸ್ಸನ್ನು ತಂದುಕೊಡಬಲ್ಲವರು ಯಾರು?

15. ಕವಿ ಎಂತಹ ಹಾಡು ಹಾಡಬೇಕೆಂದು ಬಯಸುವರು?
16. ಅಭಯರುಚಿಯ ಸಹೋದರಿಯ ಹೆಸರೇನು?
17. ಪುಟ್ಟಹಕ್ಕಿ ಗೂಡನ್ನು ಹೇಗೆ ಕಟ್ಟುತ್ತದೆ?

**IV. ಈ ಕೆಳಗಿನವುಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2x10=20**

18. ತಲಕಾಡಿನ ಲೂಟಿಯ ವಿಚಾರದಲ್ಲಿ ವಿಷ್ಣುವರ್ಧನನ ನಿಲುವೇನು?
19. ಮಂತ್ರಾಲೋಚನೆಯನ್ನು ಹೇಗೆ ನಡೆಸಬೇಕೆಂದು ರಾಮನ ಅಭಿಪ್ರಾಯ?
20. ರಾಧಾಕೃಷ್ಣನ್ ಅವರ ವೇಷಭೂಷಣಗಳ ಬಗ್ಗೆ ಬರೆಯಿರಿ.
21. ಶಿಕ್ಷಣದ ಮಹತ್ತ್ವವನ್ನು ಕುರಿತು ರಾಧಾಕೃಷ್ಣನ್ ಅವರು ಏನು ಹೇಳಿದ್ದಾರೆ?
22. ಭೀಷ್ಮರು ಕ್ರೋಧಗೊಳ್ಳಲು ಕಾರಣವೇನು?
23. ಭೀಷ್ಮರು ಕೃಷ್ಣನ ಕೈಹಿಡಿದು ಏನೆಂದು ನಿವೇದಿಸಿಕೊಂಡರು?
24. ಲೂಯಿಸ್ ಅಟಾಯಿಡೆ ಪತ್ರದಲ್ಲಿ ಚೆನ್ನಾಭೈರಾದೇವಿಗೆ ಏನೆಂದು ಬರೆದಿದ್ದನು?
25. ಶಬಲೆ ಹೇಳಿದಂತೆ ಪೋರ್ಚುಗೀಸರು ಯಾವ ಕಾರಣಗಳಿಗಾಗಿ ಯುದ್ಧಕ್ಕೆ ಸಿದ್ಧರಾಗಿದ್ದರು?
26. ಬೇರೆ ಬೇರೆ ಭಾಷಿಕರು ತನ್ನ ಕೃತಿಯನ್ನು ಹೇಗೆ ಹೊಗಳಬೇಕೆಂದು ಕವಿ ಬಯಸುವನು?
27. ಭರತ ಚಕ್ರವರ್ತಿ ಓಲಗ ಮಂಟಪವನ್ನೇರಿದ ಸಂದರ್ಭವನ್ನು ಬಣ್ಣಿಸಿ.

**V. ಈ ಸಾಹಿತಿ/ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **3x2=6**

28. ಸಾ.ಶಿ.ಮರುಳಯ್ಯ
29. ಸು.ರಂ.ಎಕ್ಕುಂಡಿ

**VI. 30. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.** **3x1=3**

ನೊಸಲೊಡೆದು ರಕ್ತಸೂಸಲು ದೃಗುದ್ವಯದಿ ಕಿಡಿ
ಮಸಗಲೌಡಗಿದು ಘನರೋಷದಿಂ ಕುರುಬಲವ
ನಸಿಯರೆದು ಭೀಷ್ಮನ ವಿಭಾಡಿಸುವೆನೀರೇಳು ಜಗವೆರಸಿ ಶತಕೋಟಿಯ

**VII.31) ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಿಸಿ.** **3x1=3**

" ಬಾನಿನಲ್ಲಿ ಗಾಳಿಪಟಗಳು ಹಕ್ಕಿಗಳಂತೆ ಹಾರಾಡುತ್ತಿದ್ದವು"

**VIII. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** **3x1=3**

32. ದೇಶ ಸುತ್ತಿ ನೋಡು ; ಕೋಶ ಓದಿನೋಡು.

**ಅಥವಾ**

ತುಂಬಿದ ಕೊಡ ತುಳುಕುವುದಿಲ್ಲ.

**IX.** **ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **3x5=15**

33. "ತಂಬುಲ ಉಗದ ಮ್ಯಾಲೆ ಮತ್ತೆ ಎತ್ತಿ ಬಾಯಿಗಾಕ್ಕೊಳ್ಳೋ ಕೆಟ್ಟತನ ಬ್ಯಾಡಾ"

34. "ಸಾವಿರ ಮೂರ್ಖರಿಗಿಂತ ಒಬ್ಬ ಪಂಡಿತ ಲೇಸು"

35. "ನೀವೊಬ್ಬರೇ ನನ್ನನ್ನು ಒಬ್ಬ ಮನುಷ್ಯರಂತೆ ಕಂಡು ವರ್ತಿಸಿದವರು"

36. "ನಡೆನುಡಿಗಳೆಡೆಯಲ್ಲಿ ಪದತಾಳ ಗತಿಯಲ್ಲಿ ಕ್ರಾಂತಿಕಿಡಿ ಕೆರಳಬೇಕು"

37. "ತೃಣವ ಮುರಿವುದಕ್ಕೆ ಕೊಡಲಿಯು ಬೇಕೆ"

38. "ಬಲಿಯನಿತ್ತೊಡೆ ಮುನಿವೆಂ"

**X.** **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **4x1=4**

39. ನವಭಾವ______________________________

____________________________________

____________________________________

_______________________ವೀರಧ್ವನಿಯೇರಬೇಕು.

**ಅಥವಾ**

ಜಾತಿಕುಲ ______________________________

____________________________________

____________________________________

___________________________ ಗುಡಗಬೇಕು.

**XI.** **ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.** **4x1=4**

40. ಸಂಕಲ್ಪಹಿಂಸೆಯೊಂದಱಿೊ
ಳಾಂ ಕಂಡೆಂ ಭವದ ದುಃಖಮುಂಡೆಂ ನೀನ್ ನಿಃ
ಶಂಕತೆಯಿನಿನಿತು ದೇಹಿಗ
ಳಂ ಕೊಂದಪೆ ನರಕದೊಳ್ ನಿವಾರಣೆವಡೆವಯ್

**XII.** **ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **4x2=8**

41. ಅ) ಜಂತ್ರ ಮಂತ್ರದ ವಿಶೇಷತೆಯನ್ನು ಪರಿಚಯ ಮಾಡಿ ಕೊಡಿ.

**ಅಥವಾ**

ಆ) ಜಯಪುರದ ಜನರಿಗೆ ಬಣ್ಣದ ಬಗೆಗೆ ಇರುವ ಮೋಹವನ್ನು ತಿಳಿಸಿ.

42. ಜೋಡಿ ಪಾರಿವಾಳಗಳ ದುಡುಕಿನ ನಿರ್ಧಾರದ ಬಗ್ಗೆ ನಿಮ್ಮ ಅಭಿಪ್ರಾಯವೇನು?

**ಅಥವಾ**

'ಪಾರಿವಾಳ' ಪದ್ಯದ ಕಥೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**XIII ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** 1x4=4(2+2)

43. ಹಕ್ಕಿ ಗೂಡಿನಲ್ಲಿ ನೋವಿದೆ, ನಲಿವಿದೆ, ಆಕ್ರಂದನವಿದೆ, ಸಂತಸದ ದನಿಯಿದೆ. ಕಾವು, ಗುಟುಕು ಪಡೆದು ಜೀವ ಕಣ್ತೆರೆವ ಸೃಷ್ಟಿಯ ಅಚ್ಚರಿಯಿದೆ. ಶತ್ರುಗಳ ಬೇಟೆಗೆ ಅಥವಾ ನೈಸರ್ಗಿಕ ವಿಕೋಪಕ್ಕೆ ತುತ್ತಾಗಿರುವ ದಾರುಣವಿದೆ. ಈ ಅವಘಡಗಳನ್ನು ಎದುರಿಸಿ ಬದುಕುವ ಸಾಹಸಗಾಥೆ ಅಲ್ಲಿ ಕಾಣುತ್ತದೆ. ಕೆಲವು ಕೀಟ, ಉರಗ ಸಂತತಿ ಮತ್ತು ಹಲವು ಸಸ್ತನಿಗಳೂ ಗೂಡು ಕಟ್ಟುತ್ತವೆ. ಆದರೆ ಹಕ್ಕಿಗಳಷ್ಟು ಕೌಶಲ್ಯದಿಂದ ಗೂಡು ಕಟ್ಟುವ ಚಾಕಚಕ್ಯತೆ ಬೇರಾವುದಕ್ಕೂ ಬಾರದು. ಹಕ್ಕಿಗಳು ಗೂಡನ್ನು ನಿರ್ಮಿಸುವುದು ಮುಖ್ಯವಾಗಿ ರಕ್ಷಣೆಗಾಗಿ. ಶೀತಗಾಳಿ, ಬಿರುಗಾಳಿ, ಮಳೆ ಪ್ರವಾಹಗಳ ವಿರುದ್ಧ ಬದುಕಲು ಅವುಗಳಿಗೆ ಗೂಡು ಬೇಕು. ಮರುಭೂಮಿಯಂಥ ಪ್ರದೇಶಗಳಲ್ಲಿ ಮರಳಿನ ಹೊಡೆತ, ಪ್ರಖರ ಸೂರ್ಯರಶ್ಮಿ ಮುಂತಾದ ಹವಾಮಾನ ವೈಪರೀತ್ಯಗಳನ್ನು ಪ್ರತಿರೋಧಿಸಲು ಗೂಡು ಬೇಕು. ಮೊಟ್ಟೆ, ಮರಿಗಳನ್ನು ರಕ್ಷಿಸಿಕೊಳ್ಳಲು, ತಮ್ಮನ್ನು ಬೇಟೆಯಾಡುವ ಪ್ರಾಣಿಗಳಿಂದ ತಪ್ಪಿಸಿಕೊಳ್ಳಲು ಎತ್ತರದ ಮರದ ತುದಿ, ಕಣಿವೆ, ಬಿಲ, ದ್ವೀಪ ಅಥವಾ ನೀರಿನ ಮೇಲೆ ಅವು ಗೂಡು ಕಟ್ಟಬೇಕು. ಮೊಟ್ಟೆ ಇಡುವ ಬೆನ್ನು ಮೂಳೆ ಪ್ರಾಣಿಗಳಲ್ಲಿ ಹಕ್ಕಿಗಳೇ ಅತಿಹೆಚ್ಚು ಉಷ್ಣದೇಹಿಗಳು. ಅವುಗಳ ದೇಹದ ಉಷ್ಣತೆಯನ್ನು ಕಾಪಾಡಲು, ಮೊಟ್ಟೆಗಳಿಗೆ ಹಾಗೂ ತುಪ್ಪಳವಿಲ್ಲದ ಮರಿಗಳಿಗೆ ಕಾವು ಕೊಡಲು ಬೆಚ್ಚನೆಯ ಗೂಡು ಬೇಕು. ತಾಯಿ ಗರ್ಭಾಶಯದಲ್ಲಿರುವ ಭ್ರೂಣದಷ್ಟೇ ಗೂಡಿನಲ್ಲಿರುವ ಮೊಟ್ಟೆ ಮರಿಗಳು ಸುರಕ್ಷಿತವಾಗಿರುತ್ತವೆ. ಅದರಿಂದಲೇ 'ಹಕ್ಕಿಗಳಿಗೆ ಗೂಡು ಮಕ್ಕಳಿಗೆ ತಾಯಿ' ಎಂಬ ಗಾದೆ ರೂಢಿಯಲ್ಲಿದೆ. ಗೂಡು ಕಟ್ಟುವಷ್ಟೇ ಅದನ್ನು ಕಟ್ಟುವ ಸ್ಥಳದ ಆಯ್ಕೆ ಹಕ್ಕಿಯ ಬದುಕಿನಲ್ಲಿ ಮಹತ್ವದ ಪಾತ್ರವಹಿಸುತ್ತದೆ. ನಭದಲ್ಲಿ ಹಾರಿ, ಪರ್ವತಗಳನ್ನು ಏರಿ, ಸಾಗರ, ದ್ವೀಪಗಳನ್ನು ದಾಟುವ ಹಕ್ಕಿಗಳು ತಮಗಿರುವ ಅಪೂರ್ವ ಹಾರಾಟ ಶಕ್ತಿಯಿಂದ ಎಲ್ಲೆಂದರಲ್ಲಿ ಗೂಡು ನಿರ್ಮಿಸಬಹುದಾದ ಅನಂತ ಅವಕಾಶಗಳನ್ನು ಪಡೆದಿವೆ. ಸಾಗರದ ದ್ವೀಪ, ಗಿರಿಶಿಖರದ ನೆತ್ತಿ, ಮನುಷ್ಯ ನುಸುಳಲಾರದ ನಿಬಿಡ ವನಶ್ರೇಣಿ, ಸೂರ್ಯನ ಬೆಳಕಿಗೂ ಪ್ರವೇಶ ನಿರಾಕರಿಸುವ ಕಗ್ಗತ್ತಲ ಕಣಿವೆ, ರಕ್ತ ಹೆಪ್ಪುಗಟ್ಟಿಸುವ ಶೀತಲ ಧ್ರುವ ಪ್ರದೇಶ. ಹೀಗೆ ಎಲ್ಲೆಲ್ಲೂ ಅವು ಗೂಡು ಕಟ್ಟಬಲ್ಲವು. ಈ ವಿಚಾರದಲ್ಲಿ ಮಾತ್ರ ಹಕ್ಕಿಯನ್ನು ಬೇರೆ ಯಾವ ಸಂಕುಲವೂ ಮೀರಿಸಲಾರದು.

**ಪ್ರಶ್ನೆಗಳು:**

ಅ) ಹಕ್ಕಿಗಳು ಗೂಡನ್ನು ಎಲ್ಲೆಲ್ಲಿ ಕಟ್ಟಬಲ್ಲವು?

ಆ) ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶವೇನು?

**XIV**.44. ನಿಮ್ಮನ್ನು ವಿಜಯಪುರದ ಶ್ರೀಶಾರದಾ ಪ್ರೌಢಶಾಲೆಯಲ್ಲಿ ಓದುತ್ತಿರುವ 'ಸುಮನ' ಎಂದು ಭಾವಿಸಿಕೊಂಡು ನಿಮ್ಮ ಅಕ್ಕನ ಮದುವೆಗೆ ಹೋಗಲು 3 ದಿನ ರಜೆ ಕೋರಿ ನಿಮ್ಮ ತರಗತಿ ಶಿಕ್ಷಕರಿಗೊಂದು ಪತ್ರ ಬರೆಯಿರಿ.

**ಅಥವಾ** **5x1=5**

ನಿಮ್ಮನ್ನು ಉಡುಪಿ ಶ್ರೀಕೃಷ್ಣಪ್ರೌಢಶಾಲೆಯಲ್ಲಿ ಓದುತ್ತಿರುವ 'ಕನಕ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆಯುವ ಗಣರಾಜ್ಯೋತ್ಸವ ಕಾರ್ಯಕ್ರಮಕ್ಕೆ ಆಹ್ವಾನಿಸಿ ನಿಮ್ಮ ಜಿಲ್ಲಾಧಿಕಾರಿಗಳಿಗೊಂದು ಪತ್ರ ಬರೆಯಿರಿ.

**XV.45. ಕೊಟ್ಟಿರುವ ಯಾವುದಾದರೂ ಒಂದು ವಿಷಯವನ್ನು ಕುರಿತು ಹತ್ತು ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.**

ಶೈಕ್ಷಣಿಕ ಪ್ರವಾಸ ಮತ್ತು ಅದರ ಪ್ರಯೋಜನಗಳು. **5x1=5**

**ಅಥವಾ**

ಮೊಬೈಲ್ ಬಳಕೆಯ ಪ್ರಯೋಜನಗಳು ಮತ್ತು ದುಷ್ಪರಿಣಾಮಗಳು.

*****